ಸಂಪುಟ – ೨

# ಮನಾಲ್

(ಸಂಶೋಧನ ಲೇಖನಗಳ ಸಂಗ್ರಹ)

ಸಂಪಾದಕರು
ಡಾ. ಬಸವರಾಜ ಎಂ. ನಾಗಸಮುದ್ರ

೨೦೨೩

Manal Publication
Nagasamudra



Scanned with CamScanner

# MANAL

A collection of research articles

Published by,
**Manal Publication,**
At post Nagasamudra
Tq : Molakalmuru, Dist : Chitradurga 577535

By
**Dr. Basavaraja M Nagasamudra**
Email : basavarajam72@gmail.com
Cell : 9686472152

All rights @ **Author**

| | |
|---|---|
| Pages | 154 |
| Paper | : 70 Gsm N S Maplitho |
| Size | : 1/8 Demmy |
| Copies | : 1000 |
| First impression | : 2023 |
| ISBN | : 978-93-5768-171-1 |
| Price | : **182** |

Cover page and book layout

**Printed at :**

ಮನಾಲ್ – ಸಂಶೋಧನ ಲೇಖನಗಳ ಸಂಗ್ರಹ.

| | |
|---|---|
| ಸಂಪುಟ | : ೦೨ |
| ಪ್ರಕಾಶಕರು | : ಮನಾಲ್ ಪಬ್ಲಿಕೇಷನ್ಸ್ ನಾಗಸಮುದ್ರ – ೫೭೭೫೩೫ |
| ಪುಟಗಳು | ; ೧೫೪ |
| ಸಂಪಾದಕರು | : ಡಾ ಬಸವರಾಜ ಎಂ ನಾಗಸಮುದ್ರ |
| ಪ್ರಥಮ ಮುದ್ರಣ | : ೨೦೨೩ |
| ಬೆಲೆ | : ೧೮೨ |
| ಮುಖಪುಟ | : ಡಾ ನೇಮಿನಾಥ ತಪಕೀರೆ |
| ಮುದ್ರಕರು | : ಬಿ.ಜಿ.ಪ್ರಿಂಟರ್ಸ್ ಕ.ವಿ.ವ. ಸಂಘ ಕಾಂಪ್ಲೇಕ್ಸ್, ಧಾರವಾಡ |



Scanned with CamScanner

## ಮುನ್ನುಡಿ

ಮನಾಲ್ ಪ್ರಕಾಶನದ ನಾಲ್ಕನೇ ಕೃತಿ ಮತ್ತು ಎರಡನೇಯ ಸಂಚಿಕೆಯಾಗಿದ್ದು ಡಾ. ಎಂ. ಬಸವರಾಜ ಅವರು ಸಂಪಾದನೆಯಲ್ಲಿ ಬರುವ ಈ ಕೃತಿಯು ಲೇಖನಗಳ ಸಂಗ್ರಹವಾಗಿದ್ದು, ಇದಕ್ಕೆ ಮುನ್ನುಡಿಯ ಕೆಲ ಮಾತುಗಳನ್ನು ಬರೆಯುವುದು ನನಗೆ ಪ್ರೀತಿಯ ಕೆಲಸವಾಗಿದೆ. ಪರಸ್ಪರ ಪಿಎಚ್.ಡಿ ಅಧ್ಯಯನದ ನೆಲೆಗಳಿಂದ ಪರಿಚಿತವಾಗಿದ್ದರೂ ಡಾ. ಬಸವರಾಜ ಆತ್ಮೀಯ ಸ್ನೇಹ ನನಗೆ ಒದಗಿದ್ದು ಇತ್ತೀಚಿನ ಕೆಲ ಆರು ವರ್ಷಗಳಲ್ಲಿ ಅವರ ನಡೆವಳಿಕೆ, ಜೀವನ ಪ್ರೀತಿ ಹಾಗೂ ನಿರಂತರ ಕ್ರಿಯಾಶೀಲತೆ ನನಗೆ ಅತ್ಯಂತ ಪ್ರಿಯವಾದವು. ಸಂಕಷ್ಟಗಳ ಜ್ವಾಲಾಮುಖಿಯ ಮೇಲೆ ಸಾಗುವ ಕಣಗಳಲ್ಲೂ ಅಂತರಂಗದಲ್ಲಿ ಪ್ರೀತಿಯ ತೆರೆಗಳನ್ನು ತಣ್ಣಗೆ ಕಾಪಿಟ್ಟಕೊಳ್ಳುವ, ಬೆಚ್ಚಗಿನ ಭಾವಗಳಲ್ಲಿ ಬೆಳಕಿನಂತೆ ಹೊರಚಾಚಿಕೊಳ್ಳುವ ಸಂದರ್ಭ ಬಂದರೆ ಲಾವಾದ ಎಸರಾಗಿ ಪುಟಿದು ಬಿಡುವ ಇವರ ವ್ಯಕ್ತಿತ್ವದ ಚಹರೆಗಳನ್ನು ಅಭಿವ್ಯಕ್ತಿಯಲ್ಲೂ ಕಾಣಬಹುದು.

ಸಾಹಿತ್ಯದ ಕೆಲವು ಪ್ರಕಾರಗಳಲ್ಲಿ ಸೃಜನಾತ್ಮಕವೆಂದು, ಕೆಲವನ್ನು ಸೃಜನೇತರವೆಂದು ವಿಂಗಡಿಸುವ ಕ್ರಮ ನಮ್ಮಲ್ಲಿ ಬೆಳೆದು ಬಂದಿದೆ. ಈ ವಿಂಗಡನೆ ಅಭ್ಯಾಸದ ಅನುಕೂಲಕ್ಕಾಗಿಯೇ ಹೊರತು ಯಾವುದೇ ಸೃಜನೇತರ ಪ್ರಕಾರ ಸೃಜನಶೀಲ ಸಂವೇದನೆಯಿಂದ ಹೊರಗುಳಿಯುವಂತಹದ್ದಲ್ಲ. ಇದು ಸಾಹಿತ್ಯದ ಅಭ್ಯಾಸಿಗಳಿಗೆ ಗೊತ್ತಿರುವ ಸಂಗತಿ. ವಿಮರ್ಶೆಯನ್ನು ಸೃಜನೇತರ ಪ್ರಕಾರವಾಗಿ ಪರಿಗಣಿಸಿದರೂ ವಿಮರ್ಶಕನ ಒಡಲೊಳಗೊಬ್ಬ ಕವಿ, ಕವಿಯ ಬರಹಗಳಲ್ಲೊಬ್ಬ ವಿಮರ್ಶಕ ಇರುತ್ತಾನೆ ಎಂಬುದನ್ನು ನಮ್ಮ ಸಾಹಿತ್ಯ ಪರಂಪರೆ ಅನುಮೋದಿಸುತ್ತ ಬಂದಿದೆ. ನಾನೇರುವೆತ್ತರಕೆ ನೀನೆರಬಲ್ಲೆಯಾ? ಎಂದು ಕವಿ ಪ್ರಶ್ನಿಸಬಹುದಾದರೂ ಸಹೃದಯನನ್ನು, ವಿಮರ್ಶಕನನ್ನು ಇವರಿಬ್ಬರಿಗೂ ಸಾಕಷ್ಟು ಸಿದ್ಧತೆಯ ಅಗತ್ಯವಿದೆ ಎಂಬುದನ್ನು ಒಪ್ಪಿಕೊಂಡರೂ ತನ್ನ ಎತ್ತರಕ್ಕೆ ನಿಲುಕಿಸಿಕೊಳ್ಳದಿದ್ದರೆ ಅದು ಕವಿತೆಯ, ಕವಿಯ ಸೋಲು ಅಥವಾ ಅದರ ಮಿತಿ ಎನ್ನಬಹುದು. ಸಾಹಿತ್ಯ ಮಾತ್ರವಲ್ಲ, ಯಾವುದೇ ಪ್ರಕಾರದ ಜ್ಞಾನಶಿಸ್ತಿಗೂ ಅದರದೆಯಾದ ಸೃಜನಶೀಲ ಮೂಲ ಪರಿಕರ ಪ್ರತಿಭೆಯ ಆಂತರಿಕ ಪ್ರಭೆ, ಸೆಳಕು ಬೇಕೇ ಬೇಕು. ವಿಮರ್ಶೆ ಇದಕ್ಕೆ ಹೊರತಲ್ಲ. ಲೇಖಕನೊಬ್ಬನ ಸಂವೇದನೆಯ ಸೂಕ್ಷ್ಮನೆಲೆಗಳನ್ನು ಗ್ರಹಿಸುವ, ವಿಶ್ಲೇಷಿಸುವ, ಅದನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುವ ವಿಮರ್ಶೆಯ ಕಾರ್ಯವಿಧಾನ ಹೆಚ್ಚು ಫಲಕಾರಿಯಾದುದು.

ಡಾ. ಬಸವರಾಜ ಎಂ ಅವರ ಮನಾಲ್ ಪ್ರಕಾಶನದಿಂದ ಹೊರಬರುತ್ತಿರುವ ನಾಲ್ಕನೆ ಕೃತಿಯಾಗಿದೆ. ಅವರ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಲಿ ಇನ್ನು ಹೆಚ್ಚು ಪುಸ್ತಕಗಳು ಅವರಿಂದ ಹೊರಬರಲಿ ಓದುಗರ ಮೆಚ್ಚುಗೆಯ ಕೃತಿಯಾಗಲಿ ಎಂದು ಆಶಿಸುತ್ತೇನೆ.

**ಡಾ. ಎಸ್. ಎ. ಗೋವರ್ಧನ್**
ಸಹಾಯಕ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.



Scanned with CamScanner

Reference:

1. Emmons, R.A., & McCullough. M.E. (2003). Counting blessings versus burdens: as experimental investigation of gratitude and subjective well-being in daily life. Journal of Personality and Social Psychology, 84(2), 377.
2. Jans-Beken, L., Jacobs, N., Janssens, M., Peeters, S., Reijnders, J., Lechner, L., &Lataster, J. (2020). Gratitude and health: An updates review. The Journal of Positive Psychology, 15(6), 743-782.
3. Tiffany SauberMillacci, Ph.D. (2023, October 3). What is gratitude and why is it so important?. Positive Psychology.com



Ramya H S


## 12.– ಪ್ರಸ್ತುತ ಶಿಕ್ಷಣದ ಪರಿಕಲ್ಪನೆ


– ರಮ್ಯ ಹೆಚ್.ಎಸ್


ಪ್ರಸ್ತುತದಲ್ಲಿ ಶಿಕ್ಷಣ ಎಂಬ ಪರಿಕಲ್ಪನೆ ಬರೀ ಮೇಲ್ನೋಟದ ಆಡಂಬರದಂತೆ ಕಂಡುಬಂದಂತೆ ಎನಿಸುತ್ತದೆ. ಏಕೆಂದರೆ, ಶಿ'ಕ್ಷಣ' ವಾಗಿರದೆ, ಶಿಕ್ಷಣವಾಗಬೇಕು ಎನ್ನುವುದು ಒಬ್ಬ ಶಿಕ್ಷಕಿಯಾಗಿ ನನ್ನ ಅಭಿಪ್ರಾಯವಾಗಿದೆ. ಇಂದಿನ ಶಿಕ್ಷಣ ಪದ್ಧತಿಯು ಕೇವಲ ಯಾಂತ್ರಿಕತೆ ಮತ್ತು ಪದವಿ ಪಡೆಯುವುದಕ್ಕೆ ಇರುವ ಒಂದು ಮಾನದಂಡದೋಪಾದಾಯಲ್ಲಿ ಇದೆ ಎನಿಸುತ್ತದೆ. ಎಷ್ಟೋ, ವಿದ್ಯಾರ್ಥಿಗಳು ಒಂದು ಗುರಿ ಮತ್ತು ಉದ್ದೇಶವೇ ಇಲ್ಲದೆ ಓದುವ ಪರಿಯು ಅವರದ್ದಾಗಿದೆ ಎಂದು ನಿಮಗೆ ಅನಿಸುವುದಿಲ್ಲವೇ ? ಕೇವಲ ಶಿಕ್ಷಣವು ಮೂಲಭೂತ ಸೌಕರ್ಯವನ್ನು ನೀಗಿಸುವಂತಹ ಒಂದು ಪರಿಕರವಾಗಿ ಅದರ ಪ್ರಯೋಜನಗಳು ಆಂತರ್ಯವಾಗಿ ಪ್ರಮುಖವಾಗಿದೆ ಎಂದು ಸಾರಿ – ಸಾರಿಯಾಗಿ ಹೇಳುವ ಶಿಕ್ಷಣದ ರಚನೆಯಾಗ ಬೇಕಿದೆ. ಈಗಿನ ಕಾಲದ ಯಾಂತ್ರಿಕ ಜೀವನದಲ್ಲಿ ಪೋಷಕರಿಗೂ ಮತ್ತು ಶಿಕ್ಷಣ ವೃಂದದಲ್ಲಿರುವವರಿಗೂ ಅನಿವಾರ್ಯವಾಗಿರುವ ಒಂದು ಮೂಲ ಸಂಸ್ಥೆ ಎಂದರೇ ಶಿಕ್ಷಣ ಸಂಸ್ಥೆಯಾಗಿದೆ. ಪೋಷಕರಿಗಾಗಿ ನಮ್ಮ ಮಗು ಏನೋ ಒಂದೋ ಕಲಿಯುತ್ತಿದೆ ಎನ್ನುವ ಭಾಸ ಹಾಗೆಯೇ ಶಿಕ್ಷಣ ವೃಂದದವರಿಗೆ ಶಿಕ್ಷಣ ಸಂಸ್ಥೆಯ ಪ್ರಕಾರವಾಗಿ ನಾವು ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆ ಎನ್ನುವ ಭಾಸದ ಕೆಲಸದ ಒತ್ತಡದ ದಿಕ್ಕಿನಲ್ಲಿ ನಮ್ಮ್ ಶಿಕ್ಷಣ ಸಾಗಿರುವುದು ನಿಜಕ್ಕೂ ಶೋಚನೀಯ ಎಂದು ಓದುವ ಮತ್ತು ಓದುವ ವೀಕ್ಷಕರಿಗೆ ಒಂದು ಕ್ಷಣಕ್ಕಾದರೂ ಹೌದು ಎನಿಸುವಂತಹ ವಾಸ್ತವಿಕವಾದ ನೈಜ ಸತ್ಯವನ್ನು ನಾನು ಇಲ್ಲಿ ತೆರೆದಿಟ್ಟಿದ್ದೇನೆ ಎಂಬುದನ್ನು ಯಾವುದೇ ರೀತಿಯ ನಿರ್ಬಂಧ ಗಳಿಲ್ಲದೆ ಹೇಳುವಲ್ಲಿ ಹಿಂದೆಬಿದ್ದಿಲ್ಲ ಎಂದು ಅಂದುಕೊಳ್ಳುತ್ತೇನೆ. ನನ್ನ ಸ್ವಂತ ಚಿಂತನೆಯ ಪ್ರಕಾರ ಯಾವುದೇ ಕಾಲದ ಶಿಕ್ಷಣವಾಗಿರಬಹುದು ಅದು ತನ್ನದೇ ಆದ ಸ್ಥಿರತೆ, ಘನತೆ ಮತ್ತು ಪ್ರಾಮುಖ್ಯತೆಯಿಂದ ಮುಂದಿನ ಪೀಳಿಗೆಯನ್ನು ಸಾಗಿಸುವಂತಿರಬೇಕು. ಇಲ್ಲದಿದ್ದರೆ, ನಾನು ಮೊದಲೇ ಹೇಳುವಂತೆ ಇದು ಕಾಟಾಚಾರದ ಮತ್ತು ವ್ಯಾಪಾರೀಕರಣದ ಕೇಂದ್ರವಾಗಿ ವ್ಯಾಪರವನ್ನು ಬೆಳೆಸಿಕೊಂಡೋಗುವ ಮಾರ್ಗವಾಗಬಾರದು. ಬದಲಾಗಿ ಶಿಕ್ಷಣದಲ್ಲಿನ ಸಾರವು ತನ್ನ ಗುಪ್ತತೆಯನ್ನು ತೆರೆದು ತನ್ನ ಮೆರುಗನ್ನು ಆಚೆ ಚೆಲ್ಲುವಂತಹ ಬೆಳಕಾಗಿ ನಮ್ಮೆಲ್ಲರ ಉತ್ಸಾಹದ ಚಿಲುಮೆಯಾದಾಗ ಮಾತ್ರ ಸಧ್ಭಾವನೆಯ ಸದ್ಗುಣದ ಅರ್ಥವು ಬಂದೊದಗುತ್ತದೆ.




Scanned with CamScanner